ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಖರ್ಗೆಯವರೂ ಸಹ ಇದನ್ನೇ ಹೇಳಿದ್ದಾರೆ, ತಾವೂ ಕೂಡ ಇದ್ದನ್ನೇ ಹೇಳುತ್ತಿದ್ದೀರಿ. ತಜ್ಞರ ಸಮಿತಿ ಮಾಡಿ ಪಾಯಿಂಟ್ ಆಫ್ ರೆಫರೆನ್ಸ್ ಕಳುಹಿಸುವಾಗ ಈ ಎಲ್ಲಾ ವಿಚಾರವನ್ನು ಕನ್ಸಿಡರ್ ಮಾಡಿಕೊಂಡು ನಾವು ನಿರ್ಣಯ ತೆಗೆದುಕೊಳ್ಳುತ್ತೇವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

7) ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ :

ವಿಷಯ : ನಕ್ಸಲೈಟ್ ಕಾರ್ಯಾಚರಣೆಯಲ್ಲಿ ಗುಂಡೇಟಿನಿಂದ ಪೋಲೀಸ್ ಅಧಿಕಾರಿ ವೆಂಕಟೇಶ್‌ರವರ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡುವ ಬಗ್ಗೆ.

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಉಪಾಧ್ಯಕ್ಷರೆ, ಮೊನ್ನೆ ದಿವಸ ನಕ್ಸಲೇಟ್ ಕಾರ್ಯಾಚರಣೆಯಲ್ಲಿ ಗುಂಡೇಟಿನಿಂದ ಮಾಡಿದಂಥ ಪೊಲೀಸ್ ಅಧಿಕಾರಿ ವೆಂಕಟೇಶ್‌ರವರ ಮರಣದ ಬಗ್ಗೆ ನಾನು ಪ್ರಸ್ತಾಪವನ್ನು ಮಾಡಿದ್ದೆ. ಇವತ್ತು ಮಾನ್ಯ ಗೃಹ ಸಚಿವರು ಒಂದು ಹೇಳಿಕೆಯನ್ನು ಕೊಡುತ್ತೇನೆಂದು ಹೇಳಿದ್ದರು. ದಯಮಾಡಿ ಅವರು ಒಂದು ಹೇಳಿಕೆಯನ್ನು ಕೊಡಬೇಕು, ಆ ಕುಟುಂಬಕ್ಕೆ ಪರಿಹಾರವನ್ನು ಸೂಕ್ತ ರೀತಿಯಿಂದ ಕೊಡಿಸಬೇಕೆಂದು ನಾನು ಮತ್ತೊಮ್ಮೆ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗೃಹ ಮತ್ತು ಕಾನೂನು ಸಚಿವರು) : ಮಾನ್ಯ ಉಪಾಧ್ಯಕ್ಷರೆ, ವೆಂಕಟೇಶ್‌ರವರು ಏನು ಮೃತಪಟ್ಟಿದ್ದಾರೆ, ಅದಕ್ಕೆ ವಿಷಾದ ಮತ್ತು ಖೇದವಾಗಿದೆ. ಆ ಸಂದರ್ಭದಲ್ಲಿ ನಿಮ್ಮ ಪೊಲೀಸ್ ಮಹಾ ನಿರ್ದೇಶಕರು ಅಲ್ಲಿಗೆ ಭೇಟಿ ಕೊಟ್ಟು ಅವರ ಕುಟುಂಬಕ್ಕೆ ಸಾಂತ್ವನವನ್ನು ಹೇಳುವುದಕ್ಕೆ ಅಲ್ಲದೆ 5 ಲಕ್ಷ ರೂ. ಗಳ ಪರಿಹಾರ ಧನವನ್ನು ಅವರ ಕುಟುಂಬಕ್ಕೆ ಕೊಡುತ್ತೇವೆ. ಅದಾದ ನಂತರ ಅವರು ನಿವೃತ್ತಿಯಾಗುವವರೆಗೂ ಯಾವ ಸಂಬಳ ಸಾರಿಗೆಯನ್ನು ತೆಗೆದುಕೊಳ್ಳುತ್ತಿದ್ದರು ಆ ಇಡೀ ಮೊತ್ತವನ್ನು ಅವರ ಕುಟುಂಬದ ವಾರಸುದಾರರಿಗೆ ಕೊಡುತ್ತೇವೆ. ಅವರ ನಿವೃತ್ತಿಯ ನಂತರ ಪಿಂಚಣಿ ವೇತನವನ್ನು ಅವರ ಕುಟುಂಬ ವರ್ಗದವರಿಗೆ ಕೊಡುತ್ತೇವೆ. ಎಸ್.ಎಸ್.ಎಲ್.ಸಿ. ಪಾಸಾದ ಒಬ್ಬ ಮಗ ಅವರಿಗೆ ಇದ್ದಾನೆ. ಆತನಿಗೆ ಶಿವಮೊಗ್ಗದಲ್ಲಿ ದ್ವೀತಿಯ ದರ್ಜೆ ಗುಮಾಸ್ಥನೆಂದು ಕೆಲಸವನ್ನು ಕೊಡುತ್ತೇವೆ. ಬಹುಶ ಇಲ್ಲಿಯವರೆಗೆ ಇಷ್ಟು ಉದಾರವಾದ ಒಂದು ಕೊಡುಗೆಯನ್ನು ಕೊಟ್ಟಿರಲಿಲ್ಲ. ಆದರೆ ಅವರು ತೋರಿಸಿದಂಥ ಒಂದು ಅಪ್ರತಿಮ ಶೌರ್ಯ ಮತ್ತು ಆದಂಥ ದುರಂತಕ್ಕೆ ಮಾನ್ಯ ಶಾಸಕರೆಲ್ಲರೂ ಒತ್ತಾಯ ಮಾಡಿದ್ದಕ್ಕಾಗಿ ಅವರನ್ನು ಅಭಿನಂದಿಸಿ ಈ ಒಂದು ಘೋಷಣೆಯನ್ನು ಮಾಡಲಿಕ್ಕೆ ನಾನು ಇಷ್ಟಪಡುತ್ತೇನೆ.